# ಶ್ರೀಮತ್ಪರಮಹಂಸೇತ್ಯಾದಿ ಮೈಸೂರ್ ಆಣ್ಡವನ್ ಸ್ವಾಮಿಗಳಿಗೆ ಒಂದು ವೈದಿಕ ಶ್ರದ್ಧಾಞ್ಜಲಿ

ಪಿ. ರಾಮಾನುಜನ್, ಬೆಂಗಳೂರು.

ಶ್ರೀಶ್ರೀನಿವಾಸ ರಾಮಾನುಜ ಮಹಾದೇಶಿಕನ್ ಎಂಬ ಶ್ರೀಮತ್ಪರಮಹಂಸೇತ್ಯಾದಿ ಮೈಸೂರ್ ಆಣ್ಡವನ್ ಸ್ವಾಮಿಗಳು ಶ್ರೀರಂಗಮ್ ಶ್ರೀಮದಾಣ್ಡವನ್ ಆಶ್ರಮದ ಹತ್ತನೆಯ ಸ್ವಾಮಿಗಳಾಗಿ ಆಚಾರ್ಯಪೀಠವನ್ನಲಂಕರಿಸಿದ ಮಹಾನು-ಭಾವರು. ಬಹು ಅಲ್ಪ ಕಾಲವೇ ಪೀಠಾಧಿಪತಿಯಾಗಿದ್ದುದರಿಂದಲೂ, ಸಂಕೋಚ ಸ್ವಭಾವದವರಾದ್ದರಿಂದಲೂ ಮತ್ತು ಕರ್ನಾಟಕ ಪ್ರಾಂತದವರಾಗಿ ಶ್ರೀಮದಾಶ್ರಮದ ಶಿಷ್ಯ, ಅಭಿಮಾನಿವರ್ಗಕ್ಕೆ ಅವರ ಪರಿಚಯ ಹೆಚ್ಚಿಲ್ಲದ ಕಾರಣ, ಅವರ ಜನ್ಮಶತಾಬ್ದಿಯ ಸದವಸರದಲ್ಲಿ ಅವರ ದಿವ್ಯ ಚರಿತ್ರೆಯನ್ನೂ ಅವರಿಗೆ ಬಹಳ ಅಭಿಮತವಾದ ವೈದಿಕ ಧರ್ಮದ ವಿಷಯವಾಗಿಯೂ ಕೆಲವು ಅಂಶಗಳನ್ನು ಪ್ರಸ್ತಾವಿಸಿ ಧನ್ಯನಾಗ ಬಯಸುತ್ತೇನೆ.

ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಟಿ. ನರ್ಸೀಪುರ ತಾಲೂಕು, ಸೋಸಲೆ ಗ್ರಾಮದಲ್ಲಿ ಹರಿಹರಪುರದ ಶ್ರೀ. ಉ.ವೇ. ಕೃಷ್ಣಮಾಚಾರ್ಯ ಹಾಗೂ ಶ್ರೀಮತಿ ರಂಗನಾಯಕಮ್ಮ ಎಂಬ ಪರಮೈಕಾಂತಿ ಶ್ರೀವೈಷ್ಣವ ದಂಪತಿಯರ ಸುಪುತ್ರರಾಗಿ ಗೋಪಾಲಾಚಾರ್ಯರೆಂಬ ನಾಮದೊಡನೆ ಶ್ರೇಷ್ಠ ಜನ್ಮ ತಾಳಿದವರು ಈ ಮಹಾನುಭಾವರು. ಇಬ್ಬರು ಸಹೋದರರರು ಮತ್ತು ಇಬ್ಬರು ಸಹೋದರಿಯರು ನಮ್ಮ ಸ್ವಾಮಿಗಳಿಗೆ. ಬಾಲ್ಯದಲ್ಲೇ ತಂದೆಯವರ ವಿಯೋಗವಾಗಲು, ಕುಟುಂಬದ ಆರ್ಥಿಕ ಪರಿಸ್ಥಿತಿಯ ಕಾರಣ ಸೋಸಲೆಯ ಸರ್ಕಾರಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗ ಅಲ್ಲಿನ ಹಿರಿಯರು ಇವರ ಪ್ರತಿಭೆಯನ್ನು ಗಮನಿಸಿ ಇವರನ್ನು ಮೈಸೂರಿನ ಮಾಹಾರಾಜ ಸಂಸ್ಕೃತ ಕಲಾಶಾಲೆಯಲ್ಲಿ ಸೇರಿ ಸಂಸ್ಕೃತ, ವೇದ, ಶಾಸ್ತ್ರಗಳ ಅಧ್ಯಯನವನ್ನು ನಡೆಸಲು ಸಲಹೆ ಕೊಟ್ಟದ್ದನ್ನು ಆಲಿಸಿ ಸ್ವಾಮಿಗಳು ಮೈಸೂರಿಗೆ ತೆರಳಿ ಸಾಹಿತ್ಯ, ವ್ಯಾಕರಣ ಶಾಸ್ತ್ರಗಳಲ್ಲಿ ವಿದ್ವತ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಉನ್ನತ ಪರಿಣತಿಯನ್ನು ಪಡೆದರು.

ಉಭಯವೇದಾಂತಗಳಲ್ಲಿ ಪ್ರಾವೀಣ್ಯ, ಒಳ್ಳೆಯ ಕವಿತ್ವ, ಮೈಸೂರು ಪರಕಾಲ ಮಠದ ಪೀಠಾಧಿಪತಿಗಳಾಗಿದ್ದ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲ ಮಹಾದೇಶಿಕರ ಅನುಗ್ರಹ, ಶ್ರೀ ನಮ್ಮಾಂಡವನ್ ಸ್ವಾಮಿಗಳಲ್ಲಿ ಮಂತ್ರೋಪದೇಶಾದಿಗಳು ನಮ್ಮ ಸ್ವಾಮಿಗೆ ಬಾಲ್ಯದಲ್ಲೇ ಉತ್ತಮ ಖ್ಯಾತಿಯನ್ನು ತಂದವು.

ನಂತರ ಜಯಲಕ್ಷ್ಮಿಯೆಂಬ ಕನ್ಯಾರತ್ನವನ್ನು ವಿವಾಹವಾಗಿ ಶಾಸ್ತ್ರೀಯಕ್ರಮದಲ್ಲಿ ಗೃಹಸ್ಥಾಶ್ರಮವನ್ನು ಭಗವತ್ಕೈಂಕ-ರ್ಯರೂಪವಾಗಿ ನಡೆಸಿ ಬಂದರು. ಸ್ವಾಮಿಗಳಿಗೆ ಆರು ಪುತ್ರಿಯರೂ, ಎರಡು ಪುತ್ರರೂ ಜನಿಸಿದರು. ಸೋಸಲೆಯ ಶ್ರೀವೇಣು ಗೋಪಾಲಸ್ವಾಮಿ ದೇವಸ್ಥಾನಕ್ಕೆ ಅನೇಕ ವರ್ಷಗಳು ವಿವಿಧ ಕೈಂಕರ್ಯ ಸಲ್ಲಿಸಿದರು. ಶ್ರೀಮತ್ಪರಮಹಂಸೇ-ತ್ಯಾದಿ ಆಕ್ಕೂರ್ ಆಂಡವನ್ ಅವರಲ್ಲಿ ಸಂಪ್ರದಾಯದ ಗ್ರಂಥಚತುಷ್ಟಯ ಮತ್ತು ಉಪನಿಷತ್ತುಗಳ ಕಾಲಕ್ಷೇಪವನ್ನು ಕ್ರಮವಾಗಿ ಮಾಡಿ ಧನ್ಯರಾದರು. ತಮ್ಮ ಆಚಾರ್ಯರನ್ನು ಕರ್ನಾಟಕಕ್ಕೆ ಬರಮಾಡಿಸುವಲ್ಲಿ ಬಹಳ ಉಲ್ಲೇಖನೀಯ ಪರಿಶ್ರಮಗಳನ್ನು ತೆಗೆದುಕೊಂಡು ಅವರ ದಿವ್ಯ ಕೃಪೆಗೆ ಪ್ರಥಮಪಾತ್ರರಾದರು. ಪ್ರೇಷ ಮಂತ್ರೋಪದೇಶವೂ ಸಂನ್ಯಾಸಾಶ್ರಮ ವಿಧಿಗಳೂ ಸ್ವಾಮಿಗೆ ಲಭಿಸಿದವು.

ವೃತ್ತಿಗಾಗಿ ಕರ್ನಾಟಕದ ಸಕಲೇಶಪುರದಲ್ಲಿ ಒಂದು ಪ್ರೌಢಶಾಲೆಯಲ್ಲೂ, ಮೈಸೂರಿನ ಮಹಾಜನ ಕಲಾಶಾಲೆಯಲ್ಲಿ ಸಂಸ್ಕೃತಾಧ್ಯಾಪಕರಾಗಿ ೩೦ ವರ್ಷಗಳು ಸೇವೆ ಸಲ್ಲಿಸಿದರು.

ತೆಂಬರೈ ಆಂಡವನ್ ಸ್ವಾಮಿಗಳ ನಂತರ ತಿರುಕ್ಕುಡಂದೈ ಆಂಡವನ್ ೯ನೇಯ ಪೀಠಾಧಿಪತಿಯಾದಾಗ, ನಮ್ಮ ಸ್ವಾಮಿಯೂ ಒಬ್ಬ ಸ್ಥಾನಾಧಿಕಾರಿಯಾಗಿದ್ದರು. ತಿರುಕ್ಕುಡಂದೈ ಆಂಡವನ್ ಸ್ವಾಮಿಗಳ ಕಾಲದಲ್ಲಿ ಆಶ್ರಮದ ಶ್ರೀಕಾರ್ಯವಾಗಿ ಬಹಳ ಕಾಲ ಸಂಪ್ರದಾಯಕ್ಕೆ ಉತ್ತಮ ಸೇವೆ ಸಲ್ಲಿಸಿದರು. ಸ್ವಾಮಿಗಳೊಡನೆ ಪಾದಯಾತ್ರೆಯಾಗಿ ಬದರೀಕಾಶ್ರಮಪರ್ಯಂತ ಭಾರತ ಸಂಚಾರದಲ್ಲಿ ಪಾಲ್ಗೊಂಡರು. ಶಾಸ್ತ್ರ, ಸಂಪ್ರದಾಯ ವಿಷಯಗಳಲ್ಲಿ ಬಹಳ ಪರಿಗಣಿತ ಶ್ರೇಷ್ಠ, ವಿದ್ವಾಂಸರಾಗಿ ಬೆಳಗಿದರು.

ಸ್ವಾಮಿಗಳು ಅನೇಕ ಗ್ರಂಥಗಳನ್ನೂ, ಕವಿತೆಗಳನ್ನೂ ರಚಿಸಿರುವರು. ಉದಾಹರಣೆಗೆ - ರಾಮಾನುಶ ನೂತ್ತಂದಾದಿ ಮತ್ತು ದೇಶಿಕಪ್ರಬಂಧ, ಪಾದುಕಾಸಹಸ್ರಗಳ ಸಂಸ್ಕೃತ, ಕನ್ನಡಾನುವಾದಗಳು, ಸಂಸ್ಕೃತದಲ್ಲಿ ರಾಮಾನುಜ ಪಂಚಾಶತ್, ಆಚಾರ್ಯ ಪರಂಪರಾ ಪ್ರಭಾವ, ಸ್ರಗ್ಧರಾ ಶತಕ, ಮಹಾಲಕ್ಷ್ಮೀ ಸ್ತುತಿ ಮುಂತಾದವೂ ಮತ್ತು ಅನೇಕ ಪ್ರಬಂಧಗಳೂ.

ಆಶುಕವಿತ್ವದಿಂದ ಪ್ರಸಿದ್ಧಿ ಹೊಂದಿ ತಮ್ಮ ಸರ್ವತೋಮುಖ ಪಾಂಡಿತ್ಯಕ್ಕಾಗಿ ಭಾರತದ ರಾಷ್ಟ್ರಪತಿಸಮ್ಮಾನವನ್ನೂ ಪಡೆದರು. ೧೯೮೮ನೇಯ ಇಸವಿಯಲ್ಲಿ ತಿರುಕ್ಕುಡಂದೈ ಆಂಡವನ್ ಸ್ವಾಮಿಗಳ ಅಸ್ವಾಸ್ಥ್ಯದಿಂದ ೭೯ನೇಯ ವಯಸ್ಸಿನಲ್ಲಿ ಆಶ್ರಮದ ಪೀಠವನ್ನಲಂಕರಿಸಿದರು. ಆದರೆ, ಮೆದುಳಿನ ಕಾಯಿಲೆಯಿಂದಾಗಿ ಸ್ವಾಮಿಗಳಿಗೆ ಅನಾರೋಗ್ಯವೇರ್ಪಟ್ಟು, ಒಂದು ವರ್ಷ ತಿರುಕ್ಕುಡಂದೈ ಆಂಡವನೊಡನಿದ್ದ ಸ್ವಾಮಿಗಳು, ಅವರ ಪರಮಪದಾನಂತರ ಕೇವಲ ೪೩ ದಿನಗಳೇ ಆಶ್ರಮವನ್ನು ನಡೆಸಿ ೧೯೮೯ರಲ್ಲಿ ಆಚಾರ್ಯಪಾದುಕೆಗಳನ್ನು ಸೇರಿದರು. ಇಂತಹ ಜ್ಞಾನ, ಭಕ್ತಿ, ವೈರಾಗ್ಯ, ಶಾಂತ್ಯಾದಿಗುಣಪರಿಪೂರ್ಣರ ಸ್ಮರಣೆ ಪರಮಪಾವನವಾದುದು. ಇಂತಹ ಮಹನೀಯರು ಈಗಿನ ಯುಗದಲ್ಲಿ ವಿರಳರೇ ಸರಿ.

ಬ್ರಹ್ಮವಿದಗ್ರೇಸರರಾದ ಆಚಾರ್ಯರ ಸ್ಮರಣೆ ಪಾವನವಾದುದರಿಂದ ಅವರ ಅಭಿಮತ ವಿಷಯಗಳಲ್ಲಿ ನಾವೂ ತೊಡಗುವುದು ಶ್ರೇಯಸ್ಕರವಾಗಿದೆ. ಅಂತೆಯೇ, ವೇದಗಳಲ್ಲಿ 'ನಾವೇದವಿನ್ಮನುತೇ ತಂ ಬೃಹಂತಮ್ .... ತಸ್ಯೈವಾತ್ಮಾ ಪದವಿತ್ ತಂ ವಿದಿತ್ವಾ, ನ ಕರ್ಮಣಾ ಲಿಪ್ಯತೇ ಪಾಪಕೇನ' (ತೈ.ಬ್ರಾ. ಕಾಠಕ ೩.೫೫,೫೬) ಎಂದಿದೆ. ಅಂದರೆ, ಅಪ್ರಮೇಯನಾದ ಭಗವಂತನನ್ನು ವೇದದಿಂದಲ್ಲದೇ ಬೇರೆ ಯಾವ ಸಾಧನದಿಂದಲೂ ಅರಿಯಲಾಗದು. ಆತನ ಪದವನ್ನರಿತವ ಪುಣ್ಯ ಪಾಪಗಳಿಂದ ಶ್ರಮಿಸುವುದಿಲ್ಲ. ಅಂತೆಯೇ ಇಲ್ಲಿ ವೇದಗಳ ಪದಪಾಠದ ವಿಷಯವಾಗಿ ಕೆಲವು ವಿಚಾರಗಳನ್ನು ಪ್ರಸ್ತಾವಿಸಲಾಗುವುದು.

## ಪಾಣಿನಿಶಿಕ್ಷೆಯಲ್ಲಿನ ನವಪದಶಯ್ಯೆ ವಿಚಾರ

ಮಹರ್ಷಿ ಪಾಣಿನಿಯು ತಮ್ಮ ಶಿಕ್ಷೆಯಲ್ಲಿ, ವೇದದ ಪದಗಳನ್ನು ಒಂಭತ್ತು ಬಗೆಯಾಗಿ ವಿಂಗಡಿಸಿರುವರು. ಉದಾತ್ತ, ಅನುದಾತ್ತ ಮತ್ತು ಸ್ವರಿತವೆಂಬ ಮೂರು ಸ್ವರಗಳು ಮತ್ತು ಅವುಗಳ ಸೇರಿಕೆಯಿಂದ ಇವು ಲಭಿಸುತ್ತವೆ. ಪದಶಯ್ಯಾ ಎಂದರೆ, ಪದಸ್ವರೂಪದಲ್ಲಿ ವಿಶೇಷಗಳನ್ನು ವ್ಯವಸ್ಥಿತವಾಗಿ ಅರಿಸುವ ವೃತ್ತಿ. ಪದಜಾತಿಗಳೆಂದು ಅರ್ಥ. 'ಅಂತೋದಾತ್ತಮಾದ್ಯುದಾತ್ತಮುದಾತ್ತಮನುದಾತ್ತಂ ನೀಚಸ್ವರಿತಮ್ । ಮಧ್ಯೋದಾತ್ತಂ ಸ್ವರಿತಂ ದ್ವ್ಯುದಾತ್ತಂ ತ್ರ್ಯುದಾತ್ತಮಿತಿ ನವ ಪದಶಯ್ಯಾ ॥' (ಪಾ.ಶಿ. ೪೫). ಇವಕ್ಕೆ ಸ್ವರವಿವೇಚನೆಗಾಗಿ ಉದಾಹರಣೆಗಳನ್ನೂ ಮಹರ್ಷಿಯು ಕೊಟ್ಟಿರುವರು. ಅಗ್ನಿಃ, ಸೋಮಃ, ಪ್ರ, ವಃ, ವೀರ್ಯಮ್, ಹವಿಷಾಮ್, ಸ್ವಃ, ಬೃಹಸ್ಪತಿಃ, ಇಂದ್ರಾಬೃಹಸ್ಪತೀ ಎಂದು. 'ಅಗ್ನಿರಿತ್ಯಂತೋದಾತ್ತಮ್, ಸೋಮ ಇತ್ಯಾದ್ಯುದಾತ್ತಮ್, ಪ್ರೇತ್ಯುದಾತ್ತಮ್, ವ ಇತ್ಯನುದಾತ್ತಮ್, ವೀರ್ಯಮ್ ನೀಚ ಸ್ವರಿತಮ್ । ಹವಿಷಾಂ ಮಧ್ಯೋದಾತ್ತಮ್, ಸ್ವರಿತಿ ಸ್ವರಿತಮ್, ಬೃಹಸ್ಪತಿರಿತಿ ದ್ವ್ಯುದಾತ್ತಮ್, ಇಂದ್ರಾಬೃಹಸ್ಪತೀ ಇತಿ ತ್ರ್ಯುದಾತ್ತಮ್'. (ಪಾ.ಶಿ. ೪೬-೪೭).

ಅಂದರೆ, ಕೊನೆಯ ಅಕ್ಷರ ಉದಾತ್ತವಾಗಿರುವುದು, ಮೊದಲ ಅಕ್ಷರ ಉದಾತ್ತವಾಗಿರುವುದು, (ಪೂರ್ತಿ) ಪದವೇ ಉದಾತ್ತ ವಾಗಿರುವುದು, (ಪದ) ಅನುದಾತ್ತವಾಗಿರುವುದು, ನೀಚಸ್ವರಿತ ಅಂದರೆ, (ಪದದಲ್ಲಿ) ಸ್ವರಿತಕ್ಕೆ ಮುಂಚೆ ಅನುದಾತ್ತಗಳು ಮಾತ್ರ ಇರುವುದು, (ಪದದ) ಮಧ್ಯ ಅಕ್ಷರ ಉದಾತ್ತವಾಗಿರುವುದು, (ಪದ) ಸ್ವರಿತವಾಗಿರುವುದು, (ಪದದಲ್ಲಿ) ಎರಡು ಉದಾತ್ತಗಳಿರುವುದು ಮತ್ತು (ಪದದಲ್ಲಿ) ಮೂರು ಉದಾತ್ತಗಳಿರುವುದು ಎಂದು ವೈದಿಕ ಪದಗಳೆಲ್ಲ ಈ ಒಂಭತ್ತು ಬಗೆಗಳಲ್ಲಿ ಅಡಗುತ್ತವೆ ಎಂದಿದ್ದಾರೆ. ಅಂದರೆ, ಇವುಗಳನ್ನು ಸ್ಪಷ್ಟವಾಗಿ ಅರಿತಲ್ಲಿ ವೇದ ಪದಗಳು ಕರಗತವಾಗುವುವು.

ಈಗ ಇವುಗಳ ನಿಷ್ಪತ್ತಿಗೆ ಕಾರಣವಾದ ವ್ಯಾಕರಣ ನಿಯಮಗಳನ್ನು (ಸೂತ್ರಗಳನ್ನು) ಅರಿಯೋಣ.

**೧. ಅಗ್ನಿಃ -** ಇದು 'ಅಗಿ ಗತೌ' ಎಂಬ ಧಾತುವಿಗ 'ಅಙ್ಗೇರ್ನಲೋಪಶ್ಚ' ಎಂಬ ಉಣಾದಿಸೂತ್ರದಿಂದ 'ನಿ'ಪ್ರತ್ಯಯ ಜೋಡಿಸಲಾಗಿ 'ಅಗ್ನಿ' ಎಂಬ ರೂಪ ಸಿದ್ಧಿಸುವುದು. ಸ್ವರನಿರ್ಣಯದ ವಿಷಯದಲ್ಲಿ ವೈಯಾಕರಣರಪೈಕಿ ಪದಗಳು ವ್ಯುತ್ಪನ್ನವಾ ಅಥವಾ ಅವ್ಯುತ್ಪನ್ನವಾ ಎಂಬುದನ್ನವಲಂಬಿಸಿ ಎರಡು ಸಿದ್ಧಾಂತಗಳುಂಟು. ವ್ಯುತ್ಪನ್ನವಾದರೆ ಪಾಣಿನಿ ಸೂತ್ರಗಳನ್ವಯಿಸುವುವು ಮತ್ತು ಅವ್ಯುತ್ಪನ್ನವಾದರೆ ಉಣಾದಿ ಮತ್ತು (ಶಾನ್ತನವರ) ಫಿಟ್ ಸೂತ್ರಗಳು ಅನ್ವಯಿಸುವುವು. ವ್ಯುತ್ಪತ್ತಿಪಕ್ಷದಲ್ಲಿ, 'ಆದ್ಯುದಾತ್ತಶ್ಚ' (ಪಾ.ಸೂ. ೩.೧.೩) ಸೂತ್ರದಿಂದ ಪ್ರತ್ಯಯ ಸ್ವರವು ಉದಾತ್ತವಾಗಲು, 'ಅನುದಾತ್ತಂ ಪದಮೇಕವರ್ಜಂ' (ಪಾ.ಸೂ. ೬.೧.೧೫೮) ಎಂಬ ಸೂತ್ರದಿಂದ 'ಅ'ಕಾರವು ಅನುದಾತ್ತವಾಗಿ 'ಅಗ್ನಿ'ಪದವು ಅನ್ತೋದಾತ್ತವಾಗುವುದು. ಅವ್ಯುತ್ಪನ್ನವಾದರೆ, 'ಫಿಷೋಽನ್ತ ಉದಾತ್ತಃ' (ಫಿ.ಸೂ. ೧) ಎಂಬ ಸೂತ್ರದಿಂದ ಅಂತೋದಾತ್ತ. 'ಅಗ್ನಿರ್ಮೂರ್ಧಾ ದಿವಃ ಕಕುತ್' ಮುಂತಾದೆಡೆಗಳಲ್ಲಿರುವಂತೆ.

**೨. ಸೋಮಃ -** 'ಷುಞ್ ಅಭಿಷವೇ' ಎಂಬ ಧಾತುವಿಗೆ 'ಅರ್ತಿಸ್ತುಸುಹುಸೃಧೃಕ್ಷಿಕ್ಷುಯಾವಾಪದಿಯಕ್ಷಿನೀಭ್ಯೋ ಮನ್' ಎಂಬ ಉಣಾದಿ ಸೂತ್ರದಿಂದ 'ಮನ್'ಪ್ರತ್ಯಯ ಸೇರಿಸಿದಾಗ 'ಸೋಮ'ಶಬ್ದ ಉಂಟಾಗುವುದು. ಇದಕ್ಕೆ ವ್ಯುತ್ಪತ್ತಿಪಕ್ಷ-

ದಲ್ಲಿ, 'ಇಣ್ಣಿತ್ಯಾದಿರ್ನಿತ್ಯಮ್' (ಪಾ.ಸೂ. ೬.೧.೧೯೭) ಎಂಬ ಸೂತ್ರದಿಂದ ಆದ್ಯುದಾತ್ತವಾಗುತ್ತದೆ. ಅವ್ಯುತ್ಪತ್ತಿಪಕ್ಷ-ದಲ್ಲಿ, 'ವೃಷಾದೀನಾಂ ಚ' (ಪಾ.ಸೂ. ೬.೧.೨೦೩) ಎಂದು ಆದ್ಯುದಾತ್ತವಾಗಿ, 'ಅನುದಾತ್ತಂ ಪದಮೇಕವರ್ಜಂ' (ಪಾ.ಸೂ. ೬.೧.೧೫೮) ಎಂಬ ಸೂತ್ರದಿಂದ 'ಮ'ಕಾರವು ಅನುದಾತ್ತವಾಗಿ, ಸಂಧಿಯಿಂದ ಉದಾತ್ತಾದನುದಾತ್ತಸ್ಯ ಸ್ವರಿತಃ (ಪಾ.ಸೂ. ೮.೪.೬೬) ಎಂದು ಸ್ವರಿತವಾಗಿ 'ಸೋಮ'ಶಬ್ದ ಆದ್ಯುದಾತ್ತವಾಗುವುದು. 'ಸೋಮೋದದದ್ಗಂಧರ್ವಾಯ' ಮುಂತಾದೆಡೆಗಳಲ್ಲಿರುವಂತೆ.

೩. **ಪ್ರ** - 'ನಿಪಾತಾ ಆದ್ಯುದಾತ್ತಾಃ' ಎಂಬ ಫಿಟ್ಸೂತ್ರದಿಂದ ಉದಾತ್ತ (ಪದ ಪೂರ್ಣವೂ). 'ಸವಿತಾ ಪ್ರಾರ್ಪಯತು' ಇತ್ಯಾದಿಗಳಲ್ಲಂತೆ.

೪. **ವಃ** - 'ಅನುದಾತ್ತಂ ಸರ್ವಮಪಾದಾದೌ' (ಪಾ.ಸೂ. ೮.೧.೧೮) ಎಂಬ ಅಧಿಕಾರದಲ್ಲಿ 'ಬಹುವಚನಸ್ಯ ವಸ್ನಸೌ' (ಪಾ.ಸೂ. ೮.೧.೨೧) ಎಂಬ ಸೂತ್ರದಿಂದ ಅನುದಾತ್ತ ವಿಹಿತ (ಪದ ಪೂರ್ಣವೂ). 'ದೇವೋ ವಸ್ಸವಿತಾ' ಮುಂತಾದೆಡೆಗಳಲ್ಲಿರುವಂತೆ.

೫. **ವೀರ್ಯಮ್** - 'ವೀರ ವಿಕ್ರಾನ್ತೌ' ಎಂಬ ಧಾತುವಿಗೆ 'ಣ್ಯತ್'ಪ್ರತ್ಯಯ ಸೇರಿಸಲಾಗಿ ವೀರ್ಯಶಬ್ದ ಉಂಟಾಗುವುದು. ಅಲ್ಲಿ ವ್ಯುತ್ಪತ್ತಿಪಕ್ಷದಲ್ಲಿ, 'ತಿತ್ ಸ್ವರಿತಮ್' (ಪಾ.ಸೂ. ೬.೧.೧೮೫) ಎಂಬ ಸೂತ್ರದಿಂದ ಪ್ರತ್ಯಯವು ಸ್ವರಿತವಾಗಿ, 'ಈ'ಕಾರವು 'ಅನುದಾತ್ತಂ ಪದಮೇಕವರ್ಜಂ' (ಪಾ.ಸೂ. ೬.೧.೧೫೮) ಎಂಬ ಸೂತ್ರದಿಂದ ಅನುದಾತ್ತ. ಅವ್ಯುತ್ಪತ್ತಿಪಕ್ಷ-ದಲ್ಲಿ, 'ಬಿಲ್ವಭಕ್ಷ್ಯವೀರ್ಯಾಣಿ ಛಂದಸಿ' ಎಂಬ ಫಿಟ್ಸೂತ್ರದಿಂದ ಅಂತಸ್ವರಿತ. 'ಉದಾತ್ತಸ್ವರಿತಪರಸ್ಯ ಸನ್ನತರಃ' (ಪಾ.ಸೂ. ೧.೨.೪೦) ಎಂದು 'ಈ'ಕಾರವು ಸನ್ನತರ ಅಂದರೆ ಅನುದಾತ್ತತರ. ಅಂದರೆ 'ವೀರ್ಯಂ' ಎಂಬ ಪದವು ನೀಚಸ್ವರಿತವಾಯಿತು. ನೀಚಪೂರ್ವಸ್ವರಿತ - ನೀಚಸ್ವರಿತ ಎಂದು ಶಾಕಪಾರ್ಥಿವದಂತೆ ಉತ್ತರಪದಲೋಪವು. 'ಸ್ವಮೇವ ವೀರ್ಯಮನು' ಮುಂತಾದೆಡೆಗಳಲ್ಲಿರುವಂತೆ.

೬. **ಹವಿಷಾಮ್** - 'ಹು ದಾನಾದನಯೋಃ' ಎಂಬ ಧಾತುವಿಗೆ 'ಅರ್ಚಿಶುಚಿಹುಸೃಪಿಚ್ಛಾದಿಚ್ಛರ್ದಿಭ್ಯ ಇಸಿಃ' ಎಂಬ ಔಣಾದಿಕ 'ಇಸಿ'ಪ್ರತ್ಯಯ ಸೇರಿ 'ಹವಿಸ್' ಎಂದಾಗುವುದು. ಅಲ್ಲಿ ವ್ಯುತ್ಪತ್ತಿಪಕ್ಷದಲ್ಲಿ 'ಆದ್ಯುದಾತ್ತಶ್ಚ' (ಪಾ.ಸೂ. ೩.೧.೩) ಸೂತ್ರದಿಂದ ಪ್ರತ್ಯಯದ 'ಇ'ಕಾರಸ್ವರವು ಉದಾತ್ತವಾಗುವುದು. ಅವ್ಯುತ್ಪತ್ತಿಪಕ್ಷದಲ್ಲಿ, 'ಫಿಷೋಽನ್ತ ಉದಾತ್ತಃ' (ಫಿ.ಸೂ. ೧) ಎಂಬ ಸೂತ್ರದಿಂದ ಅಂತೋದಾತ್ತವಾಗಲು 'ಇ'ಕಾರ ಉದಾತ್ತ. ನಂತರ ಷಷ್ಠೀಬಹುವಚನವನ್ನು ('ಆಮ್' ಎಂಬ ವಿಭಕ್ತಿಯನ್ನು), ಸೇರಿಸಿದರೆ 'ಹವಿಷಾಮ್' ಎಂಬ ಪದವು ಸಿದ್ಧಿಸುವುದು. ಅಲ್ಲಿ 'ಅನುದಾತ್ತೌ ಸುಪ್ಪಿತೌ' (ಪಾ.ಸೂ. ೩.೧.೪) ಎಂದು ವಿಭಕ್ತಿಸ್ವರ ಅನುದಾತ್ತ. 'ಹ'ಕಾರದಲ್ಲಿನ 'ಅ'ಕಾರ 'ಅನುದಾತ್ತಂ ಪದಮೇಕವರ್ಜಂ' (ಪಾ.ಸೂ. ೬.೧.೧೫೮) ಎಂಬ ಸೂತ್ರದಿಂದ ಅನುದಾತ್ತವಾಗಿ 'ಉದಾತ್ತಸ್ವರಿತಪರಸ್ಯ ಸನ್ನತರಃ' (ಪಾ.ಸೂ. ೧.೨.೪೦) ಎಂದು 'ಆ'ಕಾರವು ಸನ್ನತರವಾಗುವುದು. ಸಂಧಿಯಿಂದ 'ಉದಾತ್ತಾದನುದಾತ್ತಸ್ಯ ಸ್ವರಿತಃ' (ಪಾ.ಸೂ. ೮.೪.೬೬) ಎಂದು ವಿಭಕ್ತಿಯ 'ಆ'ಕಾರ ಸ್ವರಿತವಾಗಿ 'ಹವಿಷಾಮ್' ಎಂಬ ಶಬ್ದವು ಮಧ್ಯೋದಾತ್ತವಾಗುವುದು. 'ನಬ್ವಿಷಯಸ್ಯಾನಿಸನ್ತಸ್ಯ' ಎಂದು ನಿಷೇಧಿಸಿರುವುದರಿಂದಲೂ, 'ಸುಪ್'ಪ್ರತ್ಯಯಗಳು ಅನುದಾತ್ತವಾದ್ದರಿಂದಲೂ ಮಧ್ಯೋದಾತ್ತ. 'ಬ್ರಹ್ಮ ಯಜ್ಞಾನಾಂ ಹವಿಷಾಮಾಜ್ಯಸ್ಯ' ಮುಂತಾದೆಡೆಗಳಲ್ಲಿರುವಂತೆ.

೭. **ಸ್ವಃ** - ಈ ಪದವು ಅವ್ಯಯವಾಗಿದ್ದು 'ನ್ಯಙ್ಸ್ವರೌ ಸ್ವರಿತೌ' ಎಂಬ ಫಿಟ್ಸೂತ್ರದಿಂದ ಸ್ವರಿತ (ಪದ ಪೂರ್ಣವೂ). 'ಭೂರ್ಭುವಸ್ಸ್ವಃ' ಮುಂತಾದೆಡೆಗಳಲ್ಲಿರುವಂತೆ.

೮. **ಬೃಹಸ್ಪತಿಃ** - ಈ ಪದವು ಎರಡು ಉದಾತ್ತವುಳ್ಳದ್ದು. 'ಉಭೇ ವನಸ್ಪತ್ಯಾದಿಷು ಯುಗಪತ್' (ಪಾ.ಸೂ. ೬.೨. ೧೪೦) ಎಂಬ ಸೂತ್ರದಿಂದ ಸಮಾಸಘಟಕವಾದ ಎರಡೂ ಪದಗಳೂ ಪ್ರಕೃತಿ(ತನ್ನ ಸ್ವಾಭಾವಿಕ)ಸ್ವರ ಹೊಂದಿ ಈ ಗಣದ ಸಮಸ್ತಪದವು ದ್ವ್ಯುದಾತ್ತವಾಗುತ್ತದೆ. ಈ ಸೂತ್ರದಿಂದಲೇ 'ಬೃಹತ್'ಶಬ್ದವು ಆದ್ಯುದಾತ್ತವಾಗಿ ನಿಪಾತಿತವಾಗಿದೆ. 'ಪತ್ಯಾವೈಶ್ವರ್ಯೇ' (ಪಾ.ಸೂ. ೬.೨.೧೮) ಎಂಬ ಸೂತ್ರದಿಂದ 'ಪತಿ'ಶಬ್ದವು ಆದ್ಯುದಾತ್ತ. 'ಅನುದಾತ್ತಂ ಪದಂ ಏಕವ-ರ್ಜಂ' (ಪಾ.ಸೂ. ೬.೧.೧೫೮) ಎಂಬ ಸೂತ್ರದಿಂದ ಮಿಕ್ಕ ಎರಡು ಅಕ್ಷರಗಳೂ ಅನುದಾತ್ತ. ಅವುಗಳ ಪೈಕಿ 'ತ'ಕಾರದ ಮುಂಬರುವ 'ಇ'ಕಾರವು 'ಉದಾತ್ತಾದನುದಾತ್ತಸ್ಯ ಸ್ವರಿತಃ' (ಪಾ.ಸೂ. ೮.೪.೬೬) ಎಂದು ಸ್ವರಿತವಾಗಿ, 'ಹ'ಕಾರದಲ್ಲಿನ 'ಅ'ಕಾರವು 'ಉದಾತ್ತಸ್ವರಿತಪರಸ್ಯ ಸನ್ನತರಃ' (ಪಾ.ಸೂ. ೧.೨.೪೦) ಎಂದು ಸನ್ನತರವಾಗುವುದು. ಹೀಗೆ ಬೃಹಸ್ಪತಿ-ಶಬ್ದವು ದ್ವ್ಯುದಾತ್ತವಾಯಿತು. 'ಬೃಹಸ್ಪತಿಃ ಪ್ರಾಯಚ್ಛತ್' ಮುಂತಾದೆಡೆಗಳಲ್ಲಿರುವಂತೆ.

೯. **ಇಂದ್ರಾಬೃಹಸ್ಪತೀ** - 'ಋಜ್ರೇಂದ್ರಾಗ್ರವಜ್ರವಿಪ್ರ....' (ಉ.ಸೂ. ೨.೩೧) ಎಂಬ ಔಣಾದಿಕಸೂತ್ರದಿಂದ ಇಂದ್ರಶಬ್ದವು

'ರನ್'ಪ್ರತ್ಯಯಾಂತವು. ಇದು ವ್ಯುತ್ಪತ್ತಿಪಕ್ಷದಲ್ಲಿ 'ಞ್ನಿತ್ಯಾದಿರ್ನಿತ್ಯಮ್' (ಪಾ.ಸೂ. ೬.೧.೧೯೭) ಎಂಬ ಸೂತ್ರದಿಂದ ಆದ್ಯುದಾತ್ತವಾಗುತ್ತದೆ. ಅವ್ಯುತ್ಪತ್ತಿಪಕ್ಷದಲ್ಲಿ, 'ವೃಷಾದೀನಾಂ ಚ' (ಪಾ.ಸೂ. ೬.೧.೨೦೩) ಎಂಬ ಸೂತ್ರದಿಂದ ಆದ್ಯು-ದಾತ್ತವಾಗುವುದು. 'ಇಂದ್ರ' ಮತ್ತು 'ಬೃಹಸ್ಪತಿ' ಎಂಬ ಅರ್ಥದಲ್ಲಿ ದ್ವಂದ್ವಸಮಾಸವಾದಾಗ, 'ದೇವತಾದ್ವಂದ್ವೇ ಚ' (ಪಾ.ಸೂ. ೬.೨.೧೪೧) ಎಂಬ ಸೂತ್ರದಿಂದ ಉಭಯಪದಪ್ರಕೃತಿಸ್ವರವಾಗಿ ಮೂರು ಅಕ್ಷರಗಳು ಉದಾತ್ತವಾಗುವುದರಿಂದ (ಬೃಹಸ್ಪತಿಶಬ್ದವು ಮೇಲೇ ಹೇಳಿದಂತೆ ದ್ವ್ಯುದಾತ್ತವಾದ್ದರಿಂದ) ತ್ರ್ಯುದಾತ್ತವೆನಿಸಿದೆ. 'ಇಂದ್ರಾಬೃಹಸ್ಪತೀ ಊರು-ಭ್ಯಾಮ್' ಮುಂತಾದೆಡೆಗಳಲ್ಲಿರುವಂತೆ.

ಹೀಗೆ ವೈದಿಕಪದಗಳೆಲ್ಲವೂ ಈ ಮೇಲೆ ಹೇಳಿದ ಒಂಭತ್ತು ಪ್ರಕಾರಗಳಲ್ಲಿ ಒಂದಾಗಿರುವುದನ್ನು ಮೊದಲು ಅರಿತು ನಂತರ ಸಂಧಿ, ಅರ್ಥವಿಶೇಷ ಮತ್ತು ಪದಗಳ ಸಮಭಿವ್ಯಾಹಾರವಿಶೇಷಗಳಿಂದ ಬರುವ ವ್ಯತ್ಯಾಸಗಳನ್ನು ಅರಿಯುವುದು ಶಿಕ್ಷಾಶಾಸ್ತ್ರದ ಪ್ರಯೋಜನ. ಹೀಗೆ ಸುಶಿಕ್ಷಿತರಿಂದ ಅರಿತು ಅಧ್ಯಯನಮಾಡಲ್ಪಟ್ಟಾಗ ಸರ್ವಕ್ಷೇಮ ಲಭಿಸುವುದು.

ವಿಧಿರ್ವೈದಿಕವಾಚಾಂ ಹಿ ವ್ಯಕ್ತ್ಯೋಚ್ಚಾರಣಸಿದ್ಧಯೇ । ಶಿಕ್ಷಾಯಾಂ ಪಾಣಿನೇಃ ಸಿದ್ಧಾ ಪದಶಯ್ಯಾ ನಿರೂಪಿತಾ ॥

ಅನಾಘ್ರಾತಾಶುಭೋ ನಿತ್ಯಂ ಶಿಕ್ಷಾಘ್ರಾಣತನುರ್ಮಮ । ಶಿಕ್ಷಾಂ ಕರೋತು ರಕ್ಷಾರ್ಥಂ ಸುಶಿಕ್ಷಿತಬುಧೈರ್ನುತಃ ॥

ಪ್ರೀಯತಾಂ ವೇದವೇದ್ಯೋ ಭಗವಾನ್ ಜನಾರ್ದನಃ
ಶುಭಮಸ್ತು